# ‘ವಿಶ್ವ ಮಾನವ ದಿನಾಚರಣೆ’ ವರದಿ

ಇಂಡಿ ಪಟ್ಟಣದ ಎಸ್.ಎಸ್.ವಿ.ವಿ.ಸಂಘದ ಶ್ರೀ ಜಿ.ಆರ್.ಗಾಂಧಿ ಕಲಾ, ಶ್ರೀ ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಶ್ರೀ ಎಮ್.ಎಫ್. ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದೊಂದಿಗೆ ೩೦/೧೨/೨೦೨೦ರಂದು ರಾಷ್ಟ್ರಕವಿ ಕುವೆಂಪುರವರ ೧೧೬ನೇ ಜನ್ಮದಿನದ ನಿಮಿತ್ತ **‘ವಿಶ್ವ ಮಾನವ ದಿನಾಚರಣೆ’** ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಶೈಲ ರವರು ಮಾತನಾಡುತ್ತ ಕುವೆಂಪು ಕನ್ನಡ ಭಾಷೆಯ ದೈತ್ಯ ಕವಿ. ಆದ್ದರಿಂದ ಕರ್ನಾಟಕ ಸರ್ಕಾರ ೨೦೧೫ರಿಂದ ನಾಡಿನಾದ್ಯಂತ ‘ವಿಶ್ವ ಮಾನವ ದಿನಾಚರಣೆ’ ಆಚರಣೆ ಮಾಡುವುರ ಮೂಲಕ ಅವರಿಗೆ ಕನ್ನಡಿಗರು ಗೌರವವನ್ನು ಸಲ್ಲಿಸುತ್ತಿದ್ದಾರೆ. ಅವರು  ಸಾಹಿತಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಹೇಗೆ ಮುಂತಾದ ಕ್ಷೇತ್ರಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮದೇ ಆದ ಮಹತ್ವದ ಕೈಂಕರ್ಯವನ್ನು ಮಾಡಿದ ಧೀಮಂತ ಕವಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಎಸ್.ಬಿ.ಜಾಧವ ರವರು ಮಾತನಾಡುತ್ತ ಕನ್ನಡ ಸಾಹಿತ್ಯದ ಮೇರು ಕವಿಯಾದ ಕುವೆಂಪು ಅವರು ತಮ್ಮ ಕೃತಿಗಳಲ್ಲಿ ವೈಚಾರಿಕತೆ, ನಾಡುನುಡಿ, ದೇಶಪ್ರೇಮ, ಬ್ರಾತೃತ್ವ, ವಿಶ್ವಮಾನವತೆ, ಪ್ರಕೃತಿ ಸೌಂದರ್ಯ, ಜೀವನ ಪ್ರೀತಿ, ಆಧ್ಯಾತ್ಮಿಕಕತೆಯನ್ನು ಎಲ್ಲರೆದೆಯೊಳಗೂ ತುಂಬಿಸುತ್ತ ಕಂದಾಚಾರ, ಮೂಢತೆ, ದುರಳತೆಯನ್ನು ಸರ್ವರ ಮನಸ್ಸಿನಿಂದ ಬಡಿದೋಡಿಸುವ ಎಲ್ಲಾ ಪ್ರಯತ್ನ ಮಾಡಿದ ಸತಮಾನದ ಶ್ರೇಷ್ಠ ವ್ಯಕ್ತಿ ಕುವೆಂಪು ಎಂದರು. ಕನ್ನಡ ಭಾಷೆಯನ್ನು ವಿಶ್ವಮಟ್ಟಕ್ಕೆ ಕೊಂಡ್ಯೊಯ್ದು, ಸುಮಾರು ೮೦ಕ್ಕೂ ಹೆಚ್ಚು ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿ ಕನ್ನಡ ಭಾಷೆಗೆ ಮೊದಲ ಕೇಂದ್ರ ಸಾಹಿತ್ಯ ಅಕಾಡಮಿ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿಗಳನ್ನು ತಂದು ಕೊಟ್ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ. ಮುಂದುವರೆದು ಕುವೆಂಪು  ರಸಋಷಿ ಕವಿಯಾಗಿ ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಗಲನ್ನು ನೀಡಿದ ಹೆಗ್ಗಳಿಕೆ ಕುವೆಂಪುರವರಿಗೆ ಸಲ್ಲುತ್ತದೆ. ಕುಪ್ಪಳ್ಳಿಯ ವೆಂಕಟಪ್ಪ ಪುಟ್ಟಪ್ಪನವರು ಯುಗದ ಕವಿ ಜಗದ ಕವಿಯಾಗಿ ಮಹೋನ್ನತ ಕಾರ್ಯವನ್ನು ಮಾಡಿ ಕನ್ನಡ ನಾಡಿನ ಸಂಸ್ಕೃತಿ, ಪರಂಪರೆ, ಕನ್ನಡಾಭಿಮಾನವನ್ನು ಒಡಮೂಡಿಸಿದ ಅಗ್ರಮಾನ್ಯಕವಿಯಾಗಿ ಅವರು ತಮ್ಮಕೃತಿಗಳಲ್ಲಿ ವಿಶ್ವ ಮಾನವ ಸಂದೇಶ ನೀಡಿದ್ದಾರೆಂದರು.

ಡಾ.ಜಯಪ್ರಸಾದ್.ಡಿ ಕಾರ್ಯಕ್ರಮ ನಿರೂಪಿಸಿದರು. ಪ್ರಾಥನಾ ಗೀತೆಯನ್ನಾಗಿ ನಾಡಗೀತೆಯನ್ನು ಕುಮಾರಿ ಪೂಜಾ ಮತ್ತು ಸಂಗಡಿಗರು ನಡೆಯಿಸಿಕೊಟ್ಟರು. ಸ್ವಾಗತ ಮತ್ತು ಪರಿಚಯವನ್ನು ಡಾ. ವಿಶ್ವಾಸ್ ಎ.ಕೋರವಾರ ಮಾಡಿದರು. ರಾಘವೇಂದ್ರ ಇಂಗನಾಳ ವಂದಿಸಿದರು.

ಕಾರ್ಯಕ್ರಮದಲ್ಲಿ ಡಾ.ಪಿ.ಕೆ.ರಾಠೋಡ, ಡಾ.ಸುರೇಂದ್ರ ಶ್ರೀಕಾಂತ.ರಾಠೋಡ, ಮಲ್ಲಿಕಾರ್ಜುನ ಕೋಣದೆ, ಡಾ.ಸಿ.ಎಸ್.ಬಿರಾದಾರ, ಎಸ್.ಎಸ್.ಲಚ್ಯಾಣ, ಎಸ್.ಎಸ್.ಹೂಗಾರ, ಶ್ವೇತಾ, ಭಾಗ್ಯಶ್ರೀ, ರಾಜಕುಮಾರ, ಸೋಮು, ಪ್ರಶಾಂತ, ಮಾಧು ಉಪಸ್ಥಿತರಿದ್ದರು.